# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಪೂರ್ವ ಪರೀಕ್ಷೆ) – 2025-26

ವರ್ಗ: 9 ವಿಷಯ: ಕನ್ನಡ ದಿನಾಂಕ: -06-2025

| ವಿದ್ಯಾರ್ಥಿ/ನಿ ಹೆಸರು : | | | ಹಾಜರಿ ಸಂಖ್ಯೆ : |
|---|---|---|---|
| ಒಟ್ಟು ಎ ಶ್ರೇಣಿ : | ಒಟ್ಟು ಬಿ ಶ್ರೇಣಿ : | ಮೌಲ್ಯಮಾಪಕರ ಸಹಿ : | |

*** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ ಎ) 49 ಬಿ) 13 ಸಿ) 5 ಡಿ) 25 **ಉತ್ತರ :** ____________

2) 'ಅನ್ವರ್ಥನಾಮ' ಪದಕ್ಕೆ ಉದಾಹರಣೆ ಎ) ರಾಮ ಬಿ) ಬೆಟ್ಟ ಸಿ) ಕುರುಡ ಡಿ) ಮಹೇಶ **ಉತ್ತರ :** ____________

3) ಗುರೂಪದೇಶ ಇದು ಯಾವ ಸಂಧಿ ಎ)ಆದೇಶಸಂಧಿ ಬಿ) ಸವರ್ಣದೀರ್ಘಸಂಧಿ ಸಿ)ಗುಣಸಂಧಿ ಡಿ)ವೃದ್ಧಿಸಂಧಿ **ಉತ್ತರ :** ____________

4) ನೀನು–ನೀವು ಇವು ಈ ಪುರುಷವಾಚಕ ಸರ್ವನಾಮಗಳು **ಉತ್ತರ :** ____________
ಎ) ಉತ್ತಮಪುರುಷ ಬಿ) ಮಧ್ಯಮಪುರುಷ ಸಿ) ಪ್ರಥಮಪುರುಷ ಡಿ) ಯಾವುದೂ ಅಲ್ಲ.

5) ಮಕ್ಕಳು ಹಾಡನ್ನು ಹಾಡುವರು ಈ ವಾಕ್ಯ ಯಾವ ಕಾಲದಲ್ಲಿದೆ? **ಉತ್ತರ :** ____________
ಎ) ಭೂತಕಾಲ ಬಿ) ವರ್ತಮಾನಕಾಲ ಸಿ) ಭವಿಷ್ಯತ್ ಕಾಲ ಡಿ) ಯಾವುದೂ ಅಲ್ಲ

6) ಕೃಷ್ಣ ತನ್ನ ಬೆರಳಿನಿಂದ ಗೋವರ್ಧನಗಿರಿಯನ್ನು ಮೇಲಕ್ಕೆ ಎತ್ತಿದನು.' – ಈ ವಾಕ್ಯದಲ್ಲಿರುವ ಕರ್ತೃಪದ ಇದು: **ಉತ್ತರ :** ____________
ಎ) ಕೃಷ್ಣನು ಬಿ) ಬೆರಳಿನಿಂದ ಸಿ) ಗೋವರ್ಧನಗಿರಿಯನ್ನು ಡಿ) ಮೇಲಕ್ಕೆ

7) ವಾಸು ಬಟ್ಟೆಯಿಂದ ಕಣ್ಣುಗಳನ್ನು ಉಜ್ಜತೊಡಗಿದನು.' – ಈ ವಾಕ್ಯವು **ಉತ್ತರ :** ____________
ಎ) ಸಾಮಾನ್ಯವಾಕ್ಯ ಬಿ) ಸಂಯೋಜಿತವಾಕ್ಯ ಸಿ) ಮಿಶ್ರವಾಕ್ಯ ಡಿ) ಪ್ರಶ್ನಾರ್ಥಕವಾಕ್ಯ

8) ಸಪ್ತಮಿ ವಿಭಕ್ತಿ ಪ್ರತ್ಯಯ ಎ) ಅನ್ನು ಬಿ) ಅಲ್ಲಿ ಸಿ) ಇಂದ ಡಿ) ಅ **ಉತ್ತರ :** ____________

9) ದಿಗ್ವಾಚಕ ಪದ ಯಾವುದು? ಎ) ಹಲವು ಬಿ) ವಿಶೇಷ ಸಿ) ಪೂರ್ವ ಡಿ) ಮರ **ಉತ್ತರ :** ____________

10) ಮುಮ್ಮಡಿ – ಯಾವ ಸಮಾಸಕ್ಕೆ ಉದಾಹರಣೆ **ಉತ್ತರ :** ____________
ಎ)ತತ್ಪುರುಷ ಸಮಾಸ ಬಿ)ದ್ವಿಗು ಸಮಾಸ ಸಿ)ಬಹುವ್ರೀಹಿ ಸಮಾಸ ಡಿ) ಕ್ರಿಯಾ ಸಮಾಸ

**11. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಕನಕದಾಸರು ಹರಿದಾಸ ಪರಂಪರೆಯ ಮತ್ತು ದಾಸ ಸಾಹಿತ್ಯದ 'ಅಶ್ವಿನಿ ದೇವತೆ'ಗಳಲ್ಲಿ ಒಬ್ಬರು. ಕನಕದಾಸರು ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ಕಾಲ ಕ್ರಿ. ಶ. ಸುಮಾರು 1508. ಇವರ ತಂದೆಯ ಹೆಸರು ಬೀರಪ್ಪ; ತಾಯಿಯ ಹೆಸರು ಬಚ್ಚಮ್ಮ. ಕನಕದಾಸರ ಮೊದಲ ಹೆಸರು ತಿಮ್ಮಪ್ಪನಾಯಕ. ಇವರು ವಿಜಯನಗರ ಸಾಮ್ರಾಜ್ಯದ ನೆರಳಿನಲ್ಲಿ ಸಣ್ಣಮಂಡಲವೊಂದರ ಡಣಾಯಕರಾಗಿದ್ದರು. ಡಣಾಯಕರಾಗಿದ್ದ ತಿಮ್ಮಪ್ಪನಾಯಕರು ತಮಗೆ ದೊರೆತ ಕೊಪ್ಪರಿಗೆ ಬಂಗಾರವನ್ನು ಬಡವರಿಗೆ ದಾನ ಮಾಡಿದ್ದರಿಂದ ಅವರಿಗೆ 'ಕನಕದಾಸ' ಎಂಬ ಹೆಸರು ಬಂದಿತು. ಇವರ ವಿಶಿಷ್ಟ ಗುಣಗಳಾದ ಭಕ್ತಿ, ವೈರಾಗ್ಯ, ಕಾವ್ಯ ರಚನಾ ಪ್ರತಿಭೆಗಳು ವ್ಯಾಸರಾಯರ ಶಿಷ್ಯರಾಗುವಂತೆ ಮಾಡಿತು. ಕನಕದಾಸರ ಆರಾಧ್ಯ ದೈವ ಹಾಗೂ ಅಂಕಿತ 'ಕಾಗಿನೆಲೆಯಾದಿಕೇಶವ.' ಇವರು ರಚಿಸಿದ ಕೃತಿಗಳು ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ ಮತ್ತು ನಳ ಚರಿತೆ. ದಾಸಶ್ರೇಷ್ಠರಾದ ಇವರು ಸಂತಕವಿ, ಯುಗಪ್ರವರ್ತಕ ಹಾಗೂ ಕಾಂತ್ರಿಕಾರರು ಎಂದು ಪ್ರಖ್ಯಾತರಾಗಿದ್ದಾರೆ.

**ಪ್ರಶ್ನೆಗಳು:**

* ಕನಕದಾಸರ ಆರಾಧ್ಯ ದೈವ ಯಾವುದು? ಉತ್ತರ : ________________________________________
* ಕನಕದಾಸರು ರಚಿಸಿದ ಕೃತಿಗಳು ಯಾವುವು? ಉತ್ತರ : ________________________________________

**12. ಕೊಟ್ಟಿರುವ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮುಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?

**ಉತ್ತರ:**________________________________________________________________________
________________________________________________________________________
________________________________________________________________________
________________________________________

**13. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ಸ್+ಇ+ರ್+ಇ+ಕ್+ಅ+ನ್+ನ್+ಅ+ಡ್+ಅ = ______________ * ಮ್+ಅ+ಗ್+ಗ್+ಅ+ದ್+ಅ = ______________

**14. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಬಿಲ್ಲಹಬ್ಬ – ____________ * ವೈಜ್ಞಾನಿಕ – ____________
* ನಡುಗನ್ನಡ – ____________ * ಸಂಸ್ಕೃತಿ – ____________

**15. ಕೊಟ್ಟಿರುವ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿ ಪದಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

* ಹಲ್ಲು ಹಿಡಿದು ಮಾತಾಡು **ಉತ್ತರ:**______________ * ಆಶ್ವರ್ಯಚಕಿತನಾಗು **ಉತ್ತರ:**______________
* ಅನ್ನದ ದಾರಿ **ಉತ್ತರ:**______________ * ಹನುಮಂತನ ಬಾಲ **ಉತ್ತರ:**______________

**16. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

* ಉಡುಗೊರೆ :
* ಧ್ಯಾನಮಾಡು :

**17. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

ಕಾವೇರಿಯಿಂದ ಮಾ ಗೋ

ದಾವರಿ ವರಮಿರ್ದ ನಾಡದಾ ಕನ್ನಡದೊಳ್ ಛಂದಸ್ಸಿನ ಹೆಸರು :

**18. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿರಿ.**

ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು

*ಉಪಮೇಯ ______ *ಉಪಮಾನ : ______ * ಉಪಮಾವಾಚಕ: ______ *ಸಮಾನ ಧರ್ಮ: ______

* ಅಲಂಕಾರ : ______

*ಸಮನ್ವಯ:

* ಲಕ್ಷಣ:

**19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** .

* ಅರ್ಥವಿಲ್ಲದ ಓದು ವ್ಯರ್ಥ * ಅತಿಯಾಸೆ ಗತಿಗೇಡು * ಕಾಯಕವೇ ಕೈಲಾಸ .

**ಉತ್ತರ:**

**20.** ನೀವು ಬೆಂಗಳೂರು ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ರಾಮಚಂದ್ರ / ರಾಧಾ ಎಂದು ಭಾವಿಸಿ ನಿಮ್ಮ ಅಕ್ಕನ ಮದುವೆ ಕಾರಣ ಮೂರು ದಿನಗಳ ರಜೆಕೋರಿ ಮುಖ್ಯೋಪಾಧ್ಯಾಯರಿಗೊಂದು ರಜೆಪತ್ರ ಬರೆಯಿರಿ. **ಅಥವಾ**

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

* ಕಂಪ್ಯೂಟರ ಶಿಕ್ಷಣ * ಪರಿಸರ * ರಾಷ್ಟ್ರೀಯ ಹಬ್ಬಗಳು

**ಉತ್ತರ:**